# ಹೊಳೆನರಸೀಪುರದ ಅಪರ ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ.

## ಸಿ.ಸಿ. ನಂಃ 1685/2021

| | | |
|---|---|---|
| ಸಾಕ್ಷಿಯ ಹೆಸರು | ಃ ರಾಜೇಗೌಡ | ಸಿ.ಡಬ್ಲ್ಯೂ ಃ 3 |
| ತಂದೆ ಹೆಸರು | ಃ ಸಿದ್ದರಾಮೇಗೌಡ | ಪಿ.ಡಬ್ಲ್ಯೂ ಃ 3 |
| ವಯಸ್ಸು | ಃ 63 ವರ್ಷ | ಪ್ರಮಾಣೀಕರಿಸಿದ ದಿಃ 12/01/2023 |
| ವೃತ್ತಿ | ಃ ವ್ಯವಸಾಯ | |
| ವಾಸ | ಃ ಎಸ್.ಅಂಕನಹಳ್ಳಿ | |

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಎ.ಪಿ.ಪಿ.ಯವರಿಂದಃ

ದಿನಾಂಕಃ 23.07.2021 ರಂದು ನಮ್ಮ ಊರಿನಲ್ಲಿ ಮಳೆ ಬಿದ್ದತ್ತು. ಸದರಿ ಮಳೆ ನೀರು ಮನೆಯ ಬಾಗಿಲ ಹತ್ತಿರ ನಿಂತಿತ್ತು ಹಾಗೂ ರಸ್ತೆಯಲ್ಲಿ ನಿಂತಿತ್ತು. ಆಗ ಎಸ್.ಅಂಕನಹಳ್ಳಿ ಗ್ರಾಮದ ರುದ್ರೇಶ ಮತ್ತು ಪಾಪೇಗೌಡರವರು ನಮ್ಮ ಕುಟುಂಬದವರ ಮೇಲೆ ನೀರನ್ನು ಏಕೆ ರಸ್ತೆಗೆ ಬಿಟ್ಟಿದ್ದೀರಿ ಎಂದು ರಾತ್ರಿ 08.15 ರಲ್ಲಿ ಗಲಾಟೆ ಮಾಡಿರುತ್ತಾರೆ. ಆ ನಂತರ ನನ್ನ ಮಗ ಪೋಲೀಸ್ ಇಲಾಖೆಯ 112 ವಾಹನಕ್ಕೆ ದೂರವಾಣಿ ಕರೆ ಮಾಡಿರುತ್ತಾರೆ. ಆಗ ರಕ್ಷಣೆಗೆಂದು ಚಾಸಾ-1 ಮತ್ತು 2 ರವರು ಬಂದಿರುತ್ತಾರೆ. ನೀವು ನಮ್ಮ ಊರಿಗೆ ಏಕೆ ಬಂದಿದ್ದೀರಾ ಎಂದು ಚಾಸಾ-1 ರವರ ಮೇಲೆ ಆರೋಪಿಗಳು ಗಲಾಟೆ ಮಾಡಿದರು ಹಾಗೂ ಅವರ ಇಲಾಖೆಯ ಸಮವಸ್ತ್ರವನ್ನು ಹರಿದು ಹಾಕಿ ಕಾಲಿನಿಂದ ಮೈಕೈಗೆ ಒದ್ದಿರುತ್ತಾರೆ ಹಾಗೂ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಮತ್ತು ಕಾರಿನಿಂದ ಎಳೆದಾಡಿರುತ್ತಾರೆ. ಸಮವಸ್ತ್ರದ ಗುಂಡಿಯನ್ನು ಸಹ ಕಿತ್ತು ಹಾಕಿರುತ್ತಾರೆ. ನೀವು ಇನ್ನೊಂದು ಬಾರಿ ನಮ್ಮ ಊರಿಗೆ ಬಂದರೆ ನಿಮ್ಮನ್ನು ಕೊಲೆ ಮಾಡುತ್ತೇವೆ ಎಂದು ಚಾಸಾ-1 ರವರಿಗೆ ಹೇಳಿರುತ್ತಾರೆ. ಆರೋಪಿಗಳು ಚಾಸಾ-1 ರವರ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆ.

ನಾನು ಪೋಲೀಸರಿಗೆ 24.07.2021 ರಂದು ಘಟನೆಯ ಸಂಬಂಧ ಹೇಳಿಕೆ ನೀಡಿರುತ್ತೇನೆ. ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಗಳು ಈ ದಿನ ಗೈರು ಹಾಜರಿದ್ದು, ಆರೋಪಿ ಪರ ವಕೀಲರು ವಿನಾಯಿತಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮು.ಮಾ.1 ರಿಂದ 3 ಅನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಹೆಚ್.ಆರ್.ಜೆ. ವಕೀಲರಿಂದಃ

ಈ ಘಟನೆಗೂ ಪೂರ್ವದಲ್ಲಿ ಆರೋಪಿಗಳು ನಮ್ಮ ಮೇಲೆ ಗಲಾಟೆ ಮಾಡಿದ್ದರು. ಈ ಘಟನೆಯ ಪೂರ್ವದಲ್ಲಿ ಆರೋಪಿತರ ವಿರುದ್ಧ ದೂರನ್ನು ನೀಡಿರುತ್ತೇನೆ. ಗ್ರಾಮದವರು ಪೋಲೀಸ್ ಠಾಣೆಯಲ್ಲಿ ಜಾಮೀನು ನೀಡಿ ಅವರನ್ನು ಬಿಡಿಸಿಕೊಂಡು ಬಂದಿರುತ್ತಾರೆ. ರಾತ್ರಿ 09.00 ಗಂಟೆಗೆ ನನ್ನ ಮಗ ಪಟ್ಟಣಕ್ಕೆ ಬಂದಿರುತ್ತಾನೆ. ಹೊಳೆನರಸೀಪುರಕ್ಕೆ ನನ್ನ ಮಗ ಬಂದು ಪೋಲೀಸರನ್ನು ಕರೆದುಕೊಂಡು ಬಂದಿರುತ್ತಾನೆ.

ನನಗೆ ಪೋಲೀಸ್ ಸಬ್ ಇನ್ಸಪೆಕ್ಟರ್ ರವರ ಹೆಸರು ಗೊತ್ತಿಲ್ಲ. ಪೋಲೀಸರು ಬಂದಾಗಾ ಸುಮಾರು 20-30 ಜನ ಇದ್ದರು. ಆ ದಿನ ಪೋಲೀಸ್ ಸಬ್ ಇನ್ಸ್ ಪೆಕ್ಟರ್ ಬಂದಾಗಾ ಕತ್ತಲೆಯಾಗಿತ್ತು. ಆ ದಿನ ಕತ್ತಲೆಯಾಗಿತ್ತು ಮತ್ತು 20-30 ಜನ ಇದ್ದ ಕಾರಣ ಯಾರು ಏನು ಮಾಡಿದರು ಎಂದು ಗೊತ್ತಿಲ್ಲ. ಏನು ನಡೆಯಿತು ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ಪೋಲೀಸರು ಆ ದಿನ ನನ್ನ ಹೇಳಿಕೆಯನ್ನು ಮಾಡಿಕೊಂಡಿರುವುದಿಲ್ಲ. ಆ ದಿನ ಸುಮಾರು 20-30 ಜನ ಇದ್ದುದ್ದರಿಂದ ಯಾರ್ಯಾರು ಏನು ಹೇಳುತ್ತಿದ್ದರು ಹಾಗೂ ಯಾರ್ಯಾರು ಅವಾಚ್ಯ ಶಬ್ದಗಳಿಂದ ಬೈದರು ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ಆ ದಿನ ರುದ್ರೇಶ ಮತ್ತು ಪಾಪೇಗೌಡರವರು ಚಾಸಾ-1 ರವರಿಗೆ ಹೊಡೆದಿರುತ್ತಾರೆ. ರುದ್ರೇಶ ಮತ್ತು ಪಾಪೇಗೌಡರು ಎಷ್ಟು ಎಟುಗಳನ್ನು ಹೊಡೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿಗಳು ನನ್ನ ಅಣ್ಣನ ಮಕ್ಕಳು ಎಂದರೆ ಸರಿ. ನಮ್ಮ ಹಾಗೂ ಆರೋಪಿಗಳ ನಡುವೆ ಸುಮಾರು ವರ್ಷಗಳಿಂದ ಸಿವಿಲ್ ವ್ಯಾಜ್ಯಕ್ಕೆ ಸಂಬಂಧಿಸಿದಂತೆ ಸಣ್ಣ-ಪುಟ್ಟ ವೈಮನಸ್ಸು ಇದೆ. ಆದರೆ ಗಲಾಟೆಯಾಗಿರುವುದಿಲ್ಲ. ನನಗೆ ಓದಲು ಬರುವುದಿಲ್ಲ.

ಯಾವುದೇ ಘಟನೆ ನಡೆದಿಲ್ಲ, ನಾನು ಗಲಾಟೆ ಸಂಬಂಧ ಯಾವುದೇ ಪೋಲೀಸರಿಗೆ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಹೇಳಿಕೆ ನೀಡಲು ಪೋಲೀಸರು ಮೌಖಿಕವಾಗಿ ತಿಳಿಸಿರುತ್ತಾರೆ. ಆ ದಿನ ನನ್ನ ಹೇಳಿಕೆಯನ್ನು ಯಾವ ಪೋಲೀಸರು ಪಡೆದರು ನನಗೆ ಗೊತ್ತಿಲ್ಲ. ಹೇಳಿಕೆಯನ್ನು ಪೋಲೀಸ್ ಠಾಣೆಯಲ್ಲಿ ನೀಡಿರುತ್ತೇನೆ. ಪೋಲೀಸರು ಏನು ಟೈಪ್ ಮಾಡಿಕೊಂಡಿರುತ್ತಾರೆ ನನಗೆ ಗೊತ್ತಿಲ್ಲ. ಯಾವುದೇ ಘಟನೆ ನಡೆಯದೇ ಇದ್ದರೂ ಸಿವಿಲ್ ವ್ಯಾಜ್ಯದ ವೈಮನಸ್ಸು ಇರುವುದರಿಂದ ನಾನು ಚಾಸಾ-1 ರವರ ಜೊತೆಯಲ್ಲಿ ಶಾಮೀಲ್ ಆಗಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮು.ಮಾ. 1 ರಿಂದ 3 ಅನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಮು.ಮಾ.1 ರ ರೀತಿಯ ಸಮವಸ್ತ್ರವನ್ನು ಪೋಲೀಸರು ಧರಿಸಿರುತ್ತಾರೆ ಎಂದರೆ ಸರಿ. ಮು.ಮಾ.1 ಕ್ಕೆ ಗುಂಡಿ ಕಿತ್ತು ಹೋಗಿರುತ್ತದೆ. ಯಾವುದೇ ಘಟನೆಯ ನಡೆಯದೇ ಇದ್ದರೂ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲಃ</u>

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇ.**

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ,
ಹೊಳೆನರಸೀಪುರ